ವಿಳಾಸ ಯೂನಿರೆಜ್
ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು.

ಸಂಖ್ಯೆ: ಯುಎ-3/255/2023-24

ದಿನಾಂಕ 26-12-2023

**ಮಾನ್ಯ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,**

**"ಪ್ರಮಾಣಿತ ಅಂಚೆ ಮೂಲಕ"**

ಮಾನ್ಯರೆ.

ವಿಷಯ: ದಿನಾಂಕ **31-01-2024** ರಂದು ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯನ್ನು ಏರ್ಪಡಿಸಿರುವ ಬಗ್ಗೆ.

-:-:-

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 30(2)ರ ಪ್ರಕಾರ, ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯನ್ನು ದಿನಾಂಕ **31-01-2024** ರಂದು ಬುಧವಾರ ಬೆಳಗ್ಗೆ **11-30** ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

**ವೇ ಳಾ ಪ ಟ್ಟಿ**

| | | |
|---|---|---|
| 1. | ಸದಸ್ಯರು ಕಳುಹಿಸಲಿಚ್ಛಿಸುವ ನಿರ್ಣಯಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | **10-01-2024, ಬುಧವಾರ** |
| 2. | ಪೂರ್ವಭಾವಿ ಕಾರ್ಯಸೂಚಿಯನ್ನು ಸದಸ್ಯರುಗಳಿಗೆ ರವಾನಿಸುವ ದಿನಾಂಕ | **16-01-2024, ಮಂಗಳವಾರ** |
| 3. | ನಿರ್ಣಯಗಳಿಗೆ ತಿದ್ದುಪಡಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | **22-01-2024, ಸೋಮವಾರ** |
| 4. | ಅಂತಿಮ ಕಾರ್ಯಸೂಚಿಯನ್ನು ಸದಸ್ಯರುಗಳಿಗೆ ರವಾನಿಸುವ ದಿನಾಂಕ | **25-01-2024, ಗುರುವಾರ** |

*ಮಾನ್ಯ ಸದಸ್ಯರುಗಳು ನಿರ್ಣಯಗಳನ್ನು ಕಳುಹಿಸುವಾಗ **ಆಡಳಿತಾತ್ಮಕ ವಿಷಯಗಳನ್ನು ಹೊರತುಪಡಿಸಿ** ಲಕೋಟೆಯ ಮೇಲೆ **"ದಿನಾಂಕ 31-01-2024 ರಂದು ನಡೆಯಲಿರುವ ಶಿಕ್ಷಣ ಮಂಡಳಿ ಸಭೆಯಲ್ಲಿ ಮಂಡಿಸಲಿರುವ ನಿರ್ಣಯಗಳು"** ಎಂದು ನಮೂದಿಸಿ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಎಂದು ವೇಳಾಪಟ್ಟಿಯಲ್ಲಿ ನಮೂದಿಸಿರುವ ದಿನಾಂಕಗಳಿಗೂ ಮೊದಲು ತಲುಪುವಂತೆ ಕಳುಹಿಸಬೇಕಾಗಿ ಕೋರಲಾಗಿದೆ.*

ನಿಮ್ಮ ನಂಬುಗೆಯ,

26/12/2023

ಕುಲಸಚಿವ

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-01.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05.
4. ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ/ಕಾಲೇಜು ಅಭಿವೃದ್ಧಿ ಮಂಡಳಿ/ದೈಹಿಕ ಶಿಕ್ಷಣ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು-05.
5. **ನಿರ್ದೇಶಕರು, ಇನ್ಫರ್ಮೇಶನ್ ಅಂಡ್ ಕಮ್ಯುನಿಕೇಷನ್ ಡಿವಿಜನ್, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು- ಸದರಿ ಸಭೆಯನ್ನು ಏರ್ಪಡಿಸಿರುವುದರಿಂದ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಸೂಚಿಸಿದೆ.**
6. ಸಂಯೋಜಕರು, ಡೈರೆಕ್ಟೋರೇಟ್ ಆಫ್ ಔಟ್‌ರೀಚ್ & ಆನ್‌ಲೈನ್ ಪ್ರೋಗ್ರಾಮ್ಸ್, ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು-06.

7. ಗ್ರಂಥಪಾಲಕರು, ಸ್ನಾತಕೋತ್ತರ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು-06.
8. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು-06.
9. ನಿರ್ದೇಶಕರು, ಇ.ಎಂ.ಎಂ.ಆರ್.ಸಿ, ಮಾನಸಗಂಗೋತ್ರಿ, ಮೈಸೂರು-ಶಿಕ್ಷಣ ಮಂಡಳಿ ಸಭೆಯ ಸಂಬಂಧ ತಮ್ಮ ಸಿಬ್ಬಂದಿಯ ಮೂಲಕ **ವಿಡಿಯೋ ಮತ್ತು ಆಡಿಯೋ ಚಿತ್ರೀಕರಣ,** ಮಾಡಲು ಸಂಬಂಧಪಟ್ಟ ಸಿಬ್ಬಂದಿಯನ್ನು ಕಳುಹಿಸಲು ಕ್ರಮವಹಿಸುವುದು.
10. ವಿಶೇಷಾಧಿಕಾರಿ(ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05.
11. ಎಲ್ಲಾ ಉಪ ಕುಲಸಚಿವರು/ಉಪ ಹಣಕಾಸು ಅಧಿಕಾರಿಯವರು/ಸಹಾಯಕ ಕುಲಸಚಿವರು/ಸಹಾಯಕ ಹಣಕಾಸು ಅಧಿಕಾರಿಯವರು. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. **ಅಧೀಕ್ಷಕರು, (ಸಾಮಾನ್ಯ) ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು – ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯನ್ನು, ಕ್ರಾಫರ್ಡ್ ಭವನ, ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಏರ್ಪಡಿಸಿರುವುದರಿಂದ, ಸಭಾಂಗಣವನ್ನು ಸ್ವಚ್ಛಗೊಳಿಸಿ, 60 ಆಸನಗಳ ವ್ಯವಸ್ಥೆ, ಹಾಗೂ ಸಭೆಯು ಸುಸೂತ್ರವಾಗಿ ನಡೆಯುವ ಸಂಬಂಧ, ಸಭಾಂಗಣದಲ್ಲಿ LCD Projector, ಧ್ವನಿವರ್ಧಕ, ವ್ಯವಸ್ಥೆ ಮಾಡಿಸಲು ಹಾಗೂ ಸದರಿ ಸಭೆಗೆ ಮಾನ್ಯ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರುಗಳು ಹಾಗೂ ಪ್ರಮುಖ ಅಧಿಕಾರಿಗಳು ಆಸೀನರಾಗುವ ಸ್ಥಳಗಳು ಕ್ರಮಬದ್ಧವಾಗಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು, ಸಭೆಯ ದಿನಾಂಕದಂದು ನಡವಳಿಯನ್ನು ದಾಖಲಿಸಲು ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಇಬ್ಬರು ಶೀಘ್ರಲಿಗಾರರನ್ನು ನಿಯೋಜಿಸಲು ಹಾಗೂ ರವಾನೆ ವಿಭಾಗದ ಕಾರ್ಯನಿರ್ವಾಹಕರು, ಯಾವುದೇ ಸಕಾರಣ ನೀಡದೇ ಸಭೆಯ ಸಂಬಂಧ ಸಭಾಸೂಚಿ/ಕಾರ್ಯಸೂಚಿಯನ್ನು ನಿಗದಿತ ಸಮಯಕ್ಕೆ ಮುಂಚೆ, ಮಾನ್ಯ ಸದಸ್ಯರುಗಳಿಗೆ ಖುದ್ದಾಗಿ ತಲುಪಿಸುವ ವ್ಯವಸ್ಥೆ ಮಾಡಲು ಸಂಬಂಧಪಟ್ಟವರಿಗೆ ಸೂಚಿಸಲು ತಿಳಿಸಿದೆ.**
13. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
14. ಎಲ್ಲಾ ಅಧೀಕ್ಷಕರು, ಆಡಳಿತ ಶಾಖೆ/ಪರೀಕ್ಷಾಂಗ/ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
15. ಕಾರ್ಯನಿರ್ವಾಹಕರು, ಜಿಎಲ್-8. ಆಡಳಿತ ಶಾಖೆ-ಸಭೆಯ ಕಾರ್ಯಸೂಚಿಯನ್ನು ಮಾನ್ಯ ಸದಸ್ಯರುಗಳಿಗೆ ತಲುಪಿಸಬೇಕಾದ ತುರ್ತು ಸಂದರ್ಭಗಳಲ್ಲಿ (ಮೌಖಿಕವಾಗಿ ತಿಳಿಸಲಾಗುವುದು) ಒಂದು ವಾಹನವನ್ನು ಹಾಗೂ ಸಭೆಯ ದಿನದಂದು ಪೂರ್ವಾಹ್ನ 10-00 ಗಂಟೆಗೆ ಎರಡು ವಾಹನಗಳನ್ನು ಸಿಂಡಿಕೇಟ್ ವಿಭಾಗಕ್ಕೆ ಒದಗಿಸುವುದು.
16. ಕಾರ್ಯನಿರ್ವಾಹಕರು, ಜಿಎಲ್-6, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ಸಭೆಯ ಕಾರ್ಯಸೂಚಿಗೆ ಅಗತ್ಯವಿರುವ ಜೆರಾಕ್ಸ್ ಯಂತ್ರಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಹಾಗೂ ಅದಕ್ಕೆ ಅಗತ್ಯವಿರುವ ಎ4 ಅಳತೆಯ ಜೆರಾಕ್ಸ್ ಪೇಪರ್ (ರೀಮ್)ಗಳನ್ನು ವ್ಯವಸ್ಥೆ ಮಾಡಿಕೊಳ್ಳುವುದು,
17. ಕಾರ್ಯನಿರ್ವಾಹಕರು, ಹಶಾ-08/15, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- ಸಭೆಯ ದಿನದಂದು ಆಸನಭತ್ಯೆ/ದಿನಭತ್ಯೆ ಪ್ರಯಾಣಭತ್ಯೆ ಪಾವತಿಸಲು ಕ್ರಮ ವಹಿಸಲು ಸೂಚಿಸಿದೆ.

ವಿಶೇಷ ಸೂಚನೆ: **ಶಿಕ್ಷಣ ಮಂಡಳಿ ಸಭೆಯ ಮುಂದೆ ಮಂಡಿಸಬೇಕಾಗಿರುವ ವಿಷಯ ಮತ್ತು ಅಡಕಗಳನ್ನು (ಎ4 ಅಳತೆ) 85 Hard ಕಾಪಿ ಮತ್ತು ಇದರ ಜೊತೆಗೆ ಸಿಂಡಿಕೇಟ್ ವಿಭಾಗದ ಇ-ಮೇಲ್ ಸಂಖ್ಯೆ syndicate109999@gmail.comಗೆ ಒಂದು Soft ಕಾಪಿಯನ್ನು ಸಹ ದಿನಾಂಕ: 10-01-2024ರ ಒಳಗಾಗಿ ಸಿಂಡಿಕೇಟ್ ವಿಭಾಗಕ್ಕೆ ಕಳುಹಿಸುವುದು.**